
ಸಮುದ್ರ ಮಥನ



## ಸಮಯೋಚಿತ ಲೇಖನ

ಮಾನವನ ಹುಟ್ಟಿನೊಂದಿಗೆ ಆರಂಭವಾಗಿರಬಹುದಾದ ಮಾನಸಿಕ ಸಮಸ್ಯೆಗಳು, ದೌರ್ಜನ್ಯಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಸತ್ಯ ಸಂಗತಿ. ಇವುಗಳನ್ನು ಆರಂಭದಲ್ಲೇ ಗುರುತಿಸಿ ಲಭ್ಯವಿರುವ ಚಿಕಿತ್ಸೆಯನ್ನು ಪಡೆಯಬೇಕಾದುದು ಅಗತ್ಯ. ಮಾನಸಿಕ ರೋಗ ತಜ್ಞರ ಸಂಖ್ಯೆ ಹೆಚ್ಚಲು ಅಗತ್ಯ ಕ್ರಮ ಬೇಕು. ಮುಖ್ಯವಾಗಿ ರೋಗಿಗಳು ಹಾಗೂ ಸಂಬಂಧಿಕರು ಸಕಾಲದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು. ಈ ವಿಷಯದ ಬಗ್ಗೆ ಮಡಿವಂತಿಕೆ ಸಲ್ಲದು.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

## ಸಕಾಲಿಕ ಬರಹ

'ನಿಮ್ಮೊಡನೆ'ಯಲ್ಲಿ 'ಮರಗಳನ್ನೇಕೆ ಕಡಿಯುತ್ತೀರಿ?' (ಬಿ.ಎಂ. ಹನೀಫ್) ಬರಹ ಸಕಾಲಿಕ. ಕಾಂಕ್ರೀಟು ಕಾಡುಗಳಲ್ಲಿ ನೀರು ಇಂಗುವ ನೆಲ ಮತ್ತು ಮರಗಳು ಇಲ್ಲದಿದ್ದರೆ ನಿಸರ್ಗ ಹಾಳಾಗಿ ಹೋಗುತ್ತದೆ. ಸರ್ಕಾರ ಚಿಂತನೆ ನಡೆಸಬೇಕಾಗಿದೆ.

— ಮಹಾವೀರ ಕಾಸರ ಶಿವಮೊಗ್ಗ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಬಿ.ಎಸ್.ರಮೇಶ್ ಬೆಂಗಳೂರು ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ

## ಉಪಯುಕ್ತ ಮಾಹಿತಿ

'ಗುಚ್ಚಿ ಬಹೂಪಯೋಗಿ ಅಣಬೆ (ಆರ್.ವಿಶ್ವನಾಥ್) ಉಪಯುಕ್ತ ಮಾಹಿತಿಯನ್ನು ಒದಗಿಸಿತು. ಆರೋಗ್ಯಕ್ಕೂ ಇದು ಉಪಕಾರಿ ಎಂದು ಲೇಖನದಿಂದ ತಿಳಿಯಿತು.

—ರವೀಂದ್ರನಾಥ ಶಿ. ಯಡಹಳ್ಳಿ

## ಜಾಂಡೀಸ್‌ಗೆ ಮದ್ದು

ಆರೋಗ್ಯ ಲೇಖನ 'ಜಾಂಡೀಸ್‌ಗೆ ಆಯುರ್ವೇದ' (ಡಾ.ವೀಣಾ ಅರ್ಹಂತ್) ಮಾಹಿತಿಪೂರ್ಣವಾಗಿದೆ. ಜಾಂಡೀಸ್ ಚಿಕಿತ್ಸೆಯಲ್ಲಿ ಸಾಮಾನ್ಯವಾಗಿ ಕಬ್ಬಿನಹಾಲನ್ನು ಕುಡಿಯಲು ವೈದ್ಯರು ಶಿಫಾರಸು ಮಾಡುತ್ತಾರೆ. ಆದರೆ ಇದರಲ್ಲಿ ಕಬ್ಬನ್ನು ಕಚ್ಚಿ ಕಚ್ಚಿ ತಿನ್ನಬೇಕು ಎಂದಿದೆ. ಇದನ್ನು ಓದಿ ಅಚ್ಚರಿಯಾಯಿತು.

—ನಾರಾಯಣಯಾಜಿ ಶಿರಾಲಿ, ಎಸ್. ಮಧುರಾ ಬೆಂಗಳೂರು

## ಚಿಂತನಾರ್ಹ ಬರಹ

'ಶೌಚಾ'ಲಯ' ಕ್ರಾಂತಿ? (ಸುಮಂಗಲಾ) ಬರಹ ಚಿಂತನೆಗೆ ಹಚ್ಚುವಂತಿದೆ. ಶೌಚಾಲಯ ನಿರ್ಮಾಣಕ್ಕೆ ನಿರಾಸಕ್ತಿ ಹೇಗೆ ಒಂದು ಸಾಮಾಜಿಕ ಕಳಕಳಿಯುಳ್ಳ ಯೋಜನೆ, ಶೌಚಾಲಯ ನಿರ್ಮಾಣ ವಿವಿಧ ವರ್ಗಗಳ ನಿರಾಸಕ್ತಿ ಹಾಗೂ ಅಧಿಕಾರ ಶಾಹಿಗಳ ಕೈಯ್ಯಲ್ಲಿ ಸಿಕ್ಕಿ ಸೊರಗುತ್ತಿರುವ ವಿಚಾರವನ್ನು ಲೇಖನದಲ್ಲಿ ಎಳೆಎಳೆಯಾಗಿ ಚಿತ್ರಿಸಲಾಗಿದೆ.

—ಸುಂದರ್ ಬೆಂಗಳೂರು

## ಕ್ರಾಂತಿ ಅಲ್ಲ; ಸಂಕ್ರಾಂತಿ

ನೀರು, ದುಡ್ಡು, ಮತ್ತು ಜಾಗ ಇವು ಎಲ್ಲರ ಸಮಸ್ಯೆ. ಬಯಲು ಶೌಚಕ್ಕೆ ಒಂದು ಚೊಂಬು ನೀರು ಸಾಕು. 38 ವರ್ಷಗಳಿಂದ ಚೊಂಬುಧಾರಿಗಳನ್ನೇ ಇಲ್ಲಿ ನೋಡುತ್ತಿದ್ದೇವೆ. ಇದು ಶೌಚಾಲಯ ಕ್ರಾಂತಿ ಅಲ್ಲ; ಜಾಹೀರಾತುಗಳ ಸಂಕ್ರಾಂತಿ!

—ರಾಜಶೇಖರ ಹಾದಿಮನಿ ಧಾರವಾಡ

## ಚಿತ್ರಗೀತೆ ನೆನಪಿಸಿತು

'ಮಳೆ, ಮಂಜಿನ ಆಗುಂಬೆಯಲ್ಲಿ..' (ಭಾನುಪ್ರಕಾಶ್ ಕೆ.ಎನ್.) ಲೇಖನ ಬಹಳ ಚೆನ್ನಾಗಿದೆ. 'ಆಕಸ್ಮಿಕ' ಚಿತ್ರದ 'ಆಗುಂಬೆಯಾ.. ಪ್ರೇಮ ಸಂಜೆಯಾ..' ಹಾಡು ನೆನಪಾಯಿತು.

—ಮುಕುಂದ ಹೆರಕಲ್ಲ ಕಲಬುರಗಿ



## ಪ್ರವಾಸಿಗರಿಗೆ ಸ್ಫೂರ್ತಿ

ಆಗುಂಬೆ ಎಂದರೆ ಕೇವಲ ಸೂರ್ಯಾಸ್ತವಲ್ಲ. ಒಳಹೊಕ್ಕರೆ ನೋಡುಗರ ರಮಣೀಯ ತಾಣ. ಪ್ರವಾಸಿಗರಿಗೆ ಸ್ಫೂರ್ತಿ ನೀಡುತ್ತದೆ.

—ಗಾಣಧಾಳು ರಾಮಣ್ಣ ಚಿತ್ರದುರ್ಗ

## ಮಾರ್ಮಿಕ ಕಥೆ

'ರಾಹುಲ್' ಕಥೆ (ವಿಶ್ವನಾಥ್ ಹುಲಿಕಲ್) ಓದಿ ಒಂದು ಕ್ಷಣ ದಿಗ್ಮೂಢಳಾದೆ. ವಿಕೃತ ಮನಸ್ಸಿನ ತಾಯಿಯೂ ಇರುತ್ತಾಳೆ ಎಂದು ಖೇದವಾಯಿತು. ಪ್ರೀತಿ ವಾತ್ಸಲ್ಯದಿಂದ ಬಾಲ್ಯ ಕಳೆಯಬೇಕಾಗಿದ್ದ ರಾಹುಲ್ ಮತ್ತವನ ತಂಗಿಗೆ ತಾಯಿಯ ದರ್ಪ ದಬ್ಬಾಳಿಕೆಯಿಂದ ಬಾಲ್ಯ ಅನುಭವಿಸಲು ಆಗಲೇ ಇಲ್ಲ. ಈ ವೃತ್ತಾಂತವನ್ನು ತನ್ನ ಹುಟ್ಟುಹಬ್ಬದ ದಿನ ಸ್ನೇಹಿತೆ ಸ್ಮಿತಾಳೊಂದಿಗೆ ಹಂಚಿಕೊಂಡು ನಿರಾಳನಾಗುತ್ತಾನೆ ರಾಹುಲ್. ಕಥೆ ಮಾರ್ಮಿಕವಾಗಿದೆ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ವಾಸ್ತವ

ಕಥೆ ತುಂಬ ಇಷ್ಟವಾಯಿತು. ಇದನ್ನು ಕಥೆ ಎನ್ನುವ ಬದಲು 'ವಾಸ್ತವ' ಎಂದರೆ ಹೆಚ್ಚು ಸಮಂಜಸವಾಗುತ್ತದೆ.

—ಶಿವಸ್ವಾಮಿ ನೇನೇಕಟ್ಟಿ ಬೆಂಗಳೂರು

